## ಇಲಿ ಕೇಸ್

ಮಧ್ಯಾಹ್ನ ಊಟ ಮುಗಿಸಿ ವಿರಮಿಸುತ್ತಿದ್ದೆ. ಮೊಬೈಲ್ ರಿಂಗಣಿಸಿತು. ಅತ್ತಲಿಂದ ಹೆಣ್ಣಿನ ಧ್ವನಿ. 'ಹಲೋ, ನಾನು ಡಿ.ಸಿ. ಆಫೀಸ್‌ನಿಂದ ಮಾತಾಡ್ತಾ ಇರೋದು. ಡಾ. ರಂಗನಾಥ ಇದ್ದಾರಾ?' 'ಹೇಳಿ ಮೇಡಂ, ನಾನೇ ಮಾತಾಡ್ತೀರೋದು'. 'ಸರ್, ಇತ್ತೀಚೆಗೆ ನಿಮ್ಮ ಕ್ಲಿನಿಕ್‌ಗೆ ಇಲಿ ಕೇಸ್ ಏನಾದ್ರೂ ಬಂದಿತ್ತಾ?' ಅನಿರೀಕ್ಷಿತವಾಗಿ ಬಂದ ಪ್ರಶ್ನೆ ನನಗೆ ಅರ್ಥವಾಗಲಿಲ್ಲ. 'ಇಲ್ಲ ಮೇಡಂ' ಎಂದೆ. 'ಮುಂದೆ ಇಲಿ ಮತ್ತು ಸಾರಿ ಕೇಸ್ ಬಂದರೆ ಈ ನಂಬರ್‌ಗೆ ತಿಳಿಸಿ ಸರ್' ಎಂದರು. ಇದಾಗಿ ಎಷ್ಟೊ ಹೊತ್ತಿನ ನಂತರ ಅರ್ಥವಾಯ್ತು. ಕಂದಾಯ ಇಲಾಖೆಯ ಭಾಷೆಯಲ್ಲಿ ಮೆಡಿಕಲ್ ಶಬ್ದಗಳಾದ I.L.I. (Influenza Like Illness) 'ಇಲಿ' ಮತ್ತು S.A.R.I. (Severe Acute Respiratory Infection) 'ಸಾರಿ' ಆಗಿದೆ ಅಂತ.

**ಡಾ. ರಂಗನಾಥ ಕಟ್ಟಿ**






## ಪ್ರಾಣಿಗಳಿಗೂ ಲಾಕ್‌ಡೌನ್

ಲಾಕ್ ಡೌನ್ ಸಮಯದಲ್ಲಿ ಯಜಮಾನರು ಮನೆಯಲ್ಲಿಯೇ ಇದ್ದುದರಿಂದ ನಾವಿಬ್ಬರೂ ಹಪ್ಪಳ–ಸಂಡಿಗೆ ಮಾಡಿದೆವು. ಅವನ್ನು ಒಣಗಿಸಲು ಹಾಕಿದಾಗ ನಾಯಿ, ಮಂಗ, ಅಳಿಲುಗಳು ಬಂದು ತಿನ್ನಬಹುದು ಎಂದು 8 ವರ್ಷದ ಮಗಳು ಸಾನ್ವಿಯನ್ನು ಕಾಯಲು ಕೂರಿಸಿದ್ದೆ. ಅವಳಿಗೆ ದಿನವೂ ಕಾದು ಕಾದು ಬೇಸರವಾಗಿ, 'ಅಮ್ಮ, ಈ ಲಾಕ್‌ಡೌನ್ ಮನುಷ್ಯರಿಗಷ್ಟೇ ಯಾಕಮ್ಮ? ಪ್ರಾಣಿಗಳಿಗೂ ಇರಬೇಕಾಗಿತ್ತು ನೋಡು. ಆಗ ಅವು ಹೊರಗೆಲ್ಲೂ ಬರುತ್ತಿರಲಿಲ್ಲ. ನನಗೆ ಹಪ್ಪಳ ಕಾಯುವ ಕೆಲಸವೇ ಇರುತ್ತಿರಲಿಲ್ಲ...' ಎಂದಾಗ ಅವಳ ಬುದ್ಧಿವಂತಿಕೆಗೆ ನಾನು ಬೆಸ್ತುಬಿದ್ದೆ!

**ಸವಿತಾ ಮಾಧವ ಶಾಸ್ತ್ರಿ**